ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 286/2023 P.W. 9**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **19.01.2026** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **MCP** ವಕೀಲರಿಂದ **:**

1. ನಾನು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ನಮ್ಮ ಕಂಪನಿ White Field ನಲ್ಲಿ ಇದೆ. ನಮ್ಮದು work from home. ನನ್ನ ಜೊತೆಗೆ ನನ್ನ ತಂದೆ ತಾಯಿ, ಹೆಂಡತಿ ಮಕ್ಕಳು ಇದ್ದಾರೆ. ನಮ್ಮ ಮನೆಯ ಬಳಿ ಇರುವ ರೂಬಿ ಲೇಔಟ್ ಎಷ್ಟು ಎಕರೆ ಇದೆ ಎಂದು ಗೊತ್ತಿಲ್ಲ. ಘಟನಾ ಸ್ಥಳದಿಂದ 50 – 60 ಮೀಟರ್ ನಲ್ಲಿ ಮನೆಗಳು ಇದೆ. ಆ ಮನೆಗಳಲ್ಲಿ ವಾಸ ಇರುವ ವ್ಯಕ್ತಿಗಳು ಗೊತ್ತಿಲ್ಲ. ಸದರಿ ಲೇಔಟ್ ನ ಸುತ್ತ ಮುತ್ತ ಕಾಪೌಂಡ್ ಹಾಕಿದ್ದಾರೆ. ರೂಬಿ ಲೇಔಟ್ ಗೆ ಒಂದೇ ಗೇಟ್ ಇರುವುದು ಎಂದರೆ ಸರಿ ಅಲ್ಲ, 2 – 3 ಕಡೆಗಳು ಇವೆ. ಹೈವೆ ಕಡೆ ಒಂದೇ ಗೇಟ್ ಇರುವುದು. ಆ ಲೇಔಟ್ ಗೆ ಊರ ಒಳಗಡೆಯಿಂದ ದಾರಿ ಇದೆ. ಆ ದಾರಿಗೂ ನಮ್ಮ ಮನೆಗೂ ಸುಮಾರು 150 - 200 ಮೀಟರ್ ಅಂತರ ಇದೆ.

2. ವಿಕ್ಕಿ ಮತ್ತು ರೋನಿ ರವರನ್ನು ಯಾರು ಯಾವಾಗ ನನಗೆ ಪರಿಚಯ ಮಾಡಿಕೊಟ್ಟರ ಎಂದು ಬರೆಸಿದ್ದೇನೆ. ಸಂಜೆ 6.00 ಗಂಟೆಗೆ ಮೃತನು ತನ್ನ ಹೆಂಡತಿಯ ಜೊತೆಗೆ ಫೋನ್ ನಲ್ಲಿ ಮಾತನಾಡುತ್ತಿದ್ದ ಎಂದರೆ ಸರಿ ಅಲ್ಲ. ನಮ್ಮ ಮನೆಯಿಂದ ಘಟನಾ ಸ್ಥಳ ದೂರು ಇರುವುದರಿಂದ ಅಲ್ಲಿ ನಡೆದ ಮಾತುಕತೆ ನನಗೆ ಕೇಳಿಸಿಲ್ಲ ಎಂದರೆ ಸರಿ ಅಲ್ಲ. ನನ್ನ ಜೊತೆಗೆ ಘಟನೆಯನ್ನು ನಮ್ಮ ಮನೆಯವರು ಯಾರು ನೋಡಿದರು ಎಂದು ಪೋಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿ. ಗಲಾಟೆಯಾದ ಬಗ್ಗೆ ಮನೆಯ ಮಾಲೀಕಾರಿಗೆ, ಪೋಲೀಸರಿಗೆ ಅಥವಾ ಪರಪ್ಪನಿಗೆ ತಿಳಿಸಿಲ್ಲ ಎಂದರೆ ಸರಿ. ತನಿಖೆ ಕಾಲದಲ್ಲಿ ಆಕೆಗೆ ಯಾರಿಂದ ಕರೆ ಬರುತ್ತಿತ್ತು ಎಂದು ನಾನು ತಿಳಿಸಿಲ್ಲ ಎಂದರೆ ಸರಿ ಅಲ್ಲ. ಮಾರನೇ ದಿನ ಪೋಲೀಸರು ಬಂದಾಗ ನಾನು ಹೋಗಿ ಜಗಳ ಬಿಡಿಸಿದೆ ಎಂದು ಪೋಲೀಸರಿಗೆ ಹೇಳಿದ್ದೇನೆ ಎಂದರೆ ಸರಿ. ನನ್ನ

ಹೇಳಿಕೆಯನ್ನು ಯಾರು ಬರೆದುಕೊಂಡರು ಎಂದು ನೆನಪಿಲ್ಲ ಆದರೆ ಬರೆದಿದ್ದನ್ನು ತೋರಿಸಿದ್ದಾರೆ. ಘಟನೆ ಪೂರ್ವದಲ್ಲಿ ವಿಕ್ಕಿ ಮತ್ತು ರೋನಿ ರವರ ಪೂರ್ತಿ ಹೆಸರು ನಾನು ತಿಳಿದುಕೊಂಡಿಲ್ಲ. ಪೋಲೀಸರಿಗೆ ಹೇಳಿಕೆ ಕೊಡುವ ಕಾಲಕ್ಕೆ ವಿಕ್ಕಿ ಮತ್ತು ರೋನಿ ರವರಿಗೆ ಬೇರೆ ಹೆಸರು ಇರುವ ಬಗ್ಗೆ ನನಗೆ ಗೊತ್ತು ಎಂದು ಮಾಹಿತಿ ನೀಡಿಲ್ಲ. ಘಟನಾ ಸ್ಥಳದ ಪಕ್ಕದಲ್ಲಿ ಮುಖ್ಯ ರಸ್ತೆ ಇದ್ದು ಹೆಚ್ಚು ವಾಹನಗಳು ಸಂಚಾರ ಮಾಡುತ್ತವೆ ಎಂದರೆ ಸರಿ. ಘಟನೆ ನಂತರ ಪೋಲೀಸರು ಜೈಲ್ ಗೆ ನನ್ನನ್ನು ಕರೆದುಕೊಂಡು ಹೋಗಿ ಆರೋಪಿಯ ಗುರುತು ಹಚ್ಚುವ ಕವಾಯತು ಮಾಡಿಸಿಲ್ಲ. ನಾನು ಹೇಳಿದ್ದಂತೆ ಆರೋಪಿಯನ್ನು ಮೊದಲು ನೋಡಿಲ್ಲ ಎಂದರೆ ಸರಿ ಅಲ್ಲ. ಜಗಳವಾಡುತ್ತಿದ್ದ ಇಬ್ಬರು ವ್ಯಕ್ತಿಗಳು ಯಾವ ಬಣ್ಣದ ಬಟ್ಟೆಗಳು ಧರಿಸಿದ್ದರು ಎಂದು ನೆನಪಿಲ್ಲ. ಪೋಲಿಸರು ಬಟ್ಟೆಗಳನ್ನು ನನಗೆ ತೋರಿಸಿಲ್ಲ. ನನ್ನ ಹೇಳಿಕೆಯನ್ನು ಪೋಲೀಸರು ನೋಟ್ಸ ಮಾಡಿ ನನಗೆ ವ್ಯಾಟ್ ಆಪ್ ಮೂಲಕ ಕಳುಹಿಸಿದ್ದು ಹಗೂ ಅದರ ಆಧಾರದ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಪೋಲೀಸರು ನಮ್ಮ ಮನೆಯ ಬಳಿ ಬಂದು ಸ್ಥಳ ಪರಿಶೀಲನೆ ಮಾಡಿರುತ್ತಾರೆ. ಪೋಲೀಸರಿಗೆ ನಾನು ಯಾವುದೇ ಜಾಗ ತೋರಿಸಿಲ್ಲ ಹಾಗೂ ಮಹಜರ್ ಮಾಡಿಲ್ಲ ಎಂದರೆ ಸರಿ ಅಲ್ಲ.

ಮರು ವಿಚಾರಣೆಃ ಇಲ್ಲ.

(ಈ ಸಾಕ್ಷಿದಾರರನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.